## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 23-08-2022

### ಬಗದಲ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 61/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ 22.08.2022 ರಂದು 1500 ಗಂಟೆಗೆ ಪಿಎಸ್.ಐ. ರವರು ಠಾಣೆಯಲ್ಲಿದ್ದಾಗ ಬಗದಲ ಹಳೆಯ ಸರಕಾರಿ ಆಸ್ಪತ್ರೆ ಹತ್ತಿರ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಕೆಲವು ಜನರು ಸಾರ್ವಜನಿಕರಿಗೆ ಮಟ್ಕಾ ಚೀಟಿ ಬರೆದುಕೊಡುತ್ತಿದ್ದಾರೆ. ಅಂತ ಭಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ  ಹಿಡಿದು ವಿಚಾರಿಸಲು 1) ಅಬ್ದುಲ ಮಾಜೀದ ತಂದೆ ಅಬ್ಬಾಸ ಅಲಿ ಡಾಕುಳಗಿ, ವಯ: 38 ವರ್ಷ, ಜಾತಿ: ಮುಸ್ಲಿಂ, ಉ: ಡ್ರೈವರ ಕೆಲಸ, ಸಾ॥ ಬಗದಲ ಅಂತ ತಿಳಿಸಿದ್ದು ಅವನ ಅಂಗ ಜಡ್ತಿ ಮಾಡಿ ನೋಡಲು ಅವನ ಹತ್ತಿರ 5 ಮಟ್ಕಾ ಚೀಟಿಗಳು ಒಂದು ಬಾಲ ಪೇನ ಹಾಗೂ 200 ರೂಪಾಯಿ ಹಣ ಸಿಕ್ಕಿರುತ್ತೇವೆ. 2) ಮಹ್ಮದ ನವಾಜ ತಂದೆ ಮೈನೊದ್ದಿನ ಮಸುಲ್ದಾರ, ವಯ: 42 ವರ್ಷ, ಜಾತಿ: ಮುಸ್ಲಿಂ, ಉ: ಕೂಲಿ ಕೆಲಸ, ಸಾ॥ ಬಗದಲ ಅಂತ ತಿಳಿಸಿದ್ದು ಇವನ ಅಂಗ ಜಡ್ತಿ ಮಾಡಿ ನೋಡಲು 4 ಮಟ್ಕಾ ಚೀಟಿ ಒಂದು ಬಾಲ ಪೇನ 500/- ರೂಪಾಯಿಗಳು ಸಿಕ್ಕಿರುತ್ತೇವೆ. 3) ಎಂಡಿ ಸಲಾಮ ತಂದೆ ನವಾಜೊದ್ದಿನ ಬಾಗವಾನ, ವಯ: 28 ವರ್ಷ, ಜಾತಿ: ಮುಸ್ಲಿಂ, ಉ: ಕೂಲಿ ಕೆಲಸ, ಸಾ॥ ಬಗದಲ ಅಂತ ತಿಳಿಸಿದ್ದು, ಇವನ ಅಂಗ ಜಡ್ತಿ ಮಾಡಿ ನೋಡಲು ಅವನ ಹತ್ತಿರ 5 ಮಟ್ಕಾ ಚೀಟಿ, ಒಂದು ಬಾಲ ಪೇನ, ಹಾಗೂ 300/- ರೂಪಾಯಿ ಹಣ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಕೂಶನೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 51/2022 ಕಲಂ 379 ಐಪಿಸಿ:-

ದಿನಾಂಕ 22/08/2022 ರಂದು1200 ಗಂಟೆಗೆ  ಫಿರ್ಯಾಧಿ ಗಫಾರ ತಂದೆ ಮೈನೋದ್ದೀನಸಾಬ ಬಾಗವಾವ ಸಾ// ಹೆಡಗಾಪೂರ ರವರು ಠಾಣೆಗೆ ನೀಡಿರುವ ಲಿಖಿತ ದೂರಿನ ಸಾರಾಂಶವೆನೆಂದರೆ ದಿನಾಂಕ 21/08/2022 ರಂದು ಪ್ರತಿ ನಿತ್ಯದಂತೆ  ಹೆಡಗಪೂರ ದಿಂದ ಸೋಯಾ ವನ್ನು  ವಾಹನ ಸಂಖ್ಯೆ ಕೆ.ಎ 24/7229 ಟೆಂಪೂ 407 ಅಂದಾಜೂ ಕಿಮ್ಮತ 450000 ಲಕ್ಷ ರೂಪಾಯಿ ನೇದರಲ್ಲಿ ತೆಗೆದುಕೊಂಡು ಉದಗೀರಕ್ಕೆ ಹೋಗಿ ರಾತ್ರಿ ಸುಮಾರು 9.30 ಗಂಟೆಗೆ ಮನೆಗೆ ಬಂದು ವಾಹನ ಮನೆಯ ಮುಂದೆ ನಿಲ್ಲಿಸಿ ಮಲಗಿಕೊಂಡಿರುತ್ತಾರೆ ದಿನಾಂಕ 22/08/2022 ರಂದು 0500 ಗಂಟೆಗೆ ತನ್ನ ಹೆಂಡತಿ ಮನೆ ಗೂಡಿಸಲು ಎದ್ದು ಮನೆಯ ಹೋರಗೆ ಬಂದಾಗ ನನ್ನ ಟೆಂಪೂ ಮನೆಯ ಮುಂದೆ ಇರುವುದಿಲ್ಲ ಗ್ರಾಮಕ್ಕೆ ಹೋಗಿ ನೋಡಿದರೂ ಪತ್ತೆಯಾಗಿರುವುದ್ದಿಲಾ ಹೀಗೆ ನನ್ನ 407 ಟೆಂಪೂ ಸಂಖ್ಯೆ ಕೆ ಎ 24/ 7229 ನೇದನ್ನು ರಾತ್ರಿ ದಿನಾಂಕ 21/08/2022 ರಂದು 2130 ಗಂಟೆಯಿಂದ ದಿನಾಂಕ 22/08/2022 ರಂದು ಮುಂಜಾನೆ 0500 ಗಂಟೆಯ ಮದ್ಯದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬಸವ ಕಲ್ಯಾಣ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 100/2022 ಕಲಂ 379 ಐಪಿಸಿ :-

ದಿನಾಂಕ 22/08/2022 ರಂದು 18:00 ಗಂಟೆಗೆ ದೂರುದಾರ ಎಂ.ಡಿ ಸೊಹೇಬ ಅಕ್ತರ ತಂದೆ ಎಂ.ಡಿ ಸುಬಾನಿ ಖಾದಿಮ ವಯ: 26 ವರ್ಷ ಜಾತಿ: ಮುಸ್ಲಿಂ ಉ: ವ್ಯಾಪಾರ ಸಾ: ರಾಜೇಶ್ವರ ತಾ: ಬಸವಕಲ್ಯಾಣ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರ ಹತ್ತಿರ ಲಾರಿ ನಂ ಕೆ.ಎ 56-4486 ನೆದ್ದು ಇದ್ದು  ಟ್ರಾನ್ಸಪೋರ್ಟ ವ್ಯಾಪಾರ ಮಾಡಿಕೊಂಡು ಉಪಜೀವಿಸುತ್ತಿದ್ದು  ಬಾಬರಖಾನ ತಂದೆ ಸಾದುಲ್ಲಾಖಾನ ಇವನು ಇವರ ಹತ್ತಿರ ಲಾರಿ ಚಾಲಕ ಅಂತಾ ಕೆಲಸ ಮಾಡುತ್ತಿದ್ದು  ಲಾರಿ ಚಾಲಕ ದೀನಾಲು ರಾತ್ರಿ ಲಾರಿ  ಮನೆಯ ಬದಿಯಲ್ಲಿ ಗ್ರಾಮದ ರಾ.ಹೆ ನಂ 65 ರ ಪಕ್ಕದಲ್ಲಿ ಇದ್ದ ಸರ್ವಿಸ ರೋಡಿನ ಮೇಲೆ ನಿಲ್ಲಿಸಿ ತಮ್ಮ ಮನೆಗೆ ಹೋಗುತ್ತಾನೆ. ಹೀಗಿರಲು  ದಿನಾಂಕ 21/08/2022 ರಂದು ಕೂಡಾ ನಮ್ಮ ಲಾರಿ ಚಾಲಕ ಬಾಬರಖಾನ ತಂದೆ ಸಾದುಲ್ಲಾಖಾನ ಇವನು ನಮ್ಮ ಲಾರಿ ಚಾಲಕ ಲಾರಿಯಲ್ಲಿ ಲೋಡ ತುಂಬಿಕೊಂಡು ಬಂದು ಹಳ್ಳೀಖೇಡ ಗ್ರಾಮದಲ್ಲಿ ಖಾಲಿ ಮಾಡಿ ರಾಜೇಶ್ವರ ಗ್ರಾಮಕ್ಕೆ ಬಂದು ಲಾರಿ ತೊಳೆದು ಸಾಯಂಕಾಲ 6 ಗಂಟೆಗೆ ಸರ್ವಿಸ ರೋಡ ಮೇಲೆ ಅಮನ ಟೈರ ಪಂಚರ ಅಂಗಡಿ ಹತ್ತಿರ ನಿಲ್ಲಿಸಿ ಲಾರಿಗೆ ಕೀಲಿ ಹಾಕಿ ಲಾರಿ ನಿಲ್ಲಿಸಿದ  ನಂತರ ದಿನಾಂಕ 22/08/2022 ರಂದು ರಾತ್ರಿ 1 ಗಂಟೆ ಸುಮಾರಿಗೆ ಲಾರಿ ಹತ್ತಿರ ಹೋಗಿ ನೋಡಲು ಸದರಿ ಲಾರಿ ನಿಂತ ಸ್ಥಳದಲ್ಲಿಯೆ ಇತ್ತು. ಬೆಳಿಗ್ಗೆ 7 ಗಂಟೆಗೆ ಮತ್ತೆ ಮನೆಯಿಂದ

ಎದ್ದು ನಮ್ಮ ಲಾರಿ ಲಾರಿ ಜಿಲ್ಲಿಸಿದ ಸ್ಥಳಕ್ಕೆ ಹೋಗಿ ನೋಡಲು ನಮ್ಮ ಲಾರಿ ಇರಲಿಲ್ಲ . ಯಾರೋ ಅಪರಿಚೀತ ಕಳ್ಳರು ಲಾರಿಯನ್ನು ದಿನಾಂಕ 22/08/2022 ರಂದು ರಾತ್ರಿ 1 ಗಂಟೆಯಿಂದ ಬೆಳಿಗ್ಗೆ 7 ಗಂಟೆಯ ಅವಧಿಯಲ್ಲಿ ರೋಡಿನ ಮೇಲೆ ನಿಲ್ಲಿಸಿದ ಅಂದಾಜು 8 ಲಕ್ಷ ರೂಪಾಯಿಬೆಲೆ ಉಳ್ಳ ನಮ್ಮ ಲಾರಿಯನ್ನು ಕಳವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.